**ದಿಃ10.03.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಂ.ಎನ್.ಎಸ್ ವಕೀಲರಿಂದ ಃ**

ಪ್ರತಿವಾದಿ ದಾವಾ ಸ್ವತ್ತನ್ನು ಬಾಡಿಗೆ ಪಡೆದ ನಂತರದಲ್ಲಿ ಮಾರುತಿ ಬಾರ್ ಆ್ಯಂಡ್ ರೆಸ್ಟೋರೆಂಟ್ ಎಂಬ ಹೆಸರಿನಲ್ಲಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ. ಮಾರುತಿ ಬಾರ್ ಆ್ಯಂಡ್ ರೆಸ್ಟೋರೆಂಟ್ ಗೆ ಸಂಬಂಧಿಸಿದ ಬ್ಯಾಂಕ್ ಖಾತೆ ಮಡಿಕೇರಿ ಶಾಖೆಯ ಕೆನರಾ ಬ್ಯಾಂಕಿನಲ್ಲಿ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಖಾತೆಯಿಂದ ಪ್ರತಿವಾದಿ ನನಗೆ ಬಾಡಿಗೆ ಹಣ ಕಳುಹಿಸುತ್ತಿದ್ದರು ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. 1. ದಿಃ07.02.2017 ರಂದು 30 ಸಾವಿರ, 2. ದಿಃ08.03.2017 ರಂದು 30 ಸಾವಿರ, 3. ದಿಃ07.04.2017 ರಂದು 30 ಸಾವಿರ, 4. ದಿಃ06.05.2017 ರಂದು 30 ಸಾವಿರ, 5. ದಿಃ07.06.2017 ರಂದು 33 ಸಾವಿರ, 6. ದಿಃ10.07.2017 ರಂದು 33 ಸಾವಿರ, 7. ದಿಃ26.07.2017 ರಂದು 30 ಸಾವಿರ , 8.ದಿಃ07.08.2017 ರಂದು 33 ಸಾವಿರ, 9.ದಿಃ07.09.2017 ರಂದು 33 ಸಾವಿರ, 10.ದಿಃ06.10.2017 ರಂದು 33 ಸಾವಿರ, 11.ದಿಃ09.11.2017 ರಂದು 33 ಸಾವಿರ, 12.ದಿಃ07.12.2017 ರಂದು 33 ಸಾವಿರ, 13.ದಿಃ06.01.2018 ರಂದು 33 ಸಾವಿರ, 14.ದಿಃ06.02.2018 ರಂದು ರಂದು 33 ಸಾವಿರ, 15.ದಿಃ06.03.2018 ರಂದು ರಂದು 33 ಸಾವಿರ, 16.ದಿಃ07.03.2018

ರಂದು ರಂದು 33 ಸಾವಿರ, 17.ದಿಃ06.04.2018 ರಂದು ರಂದು 33 ಸಾವಿರ, 18.ದಿಃ08.05.2018 ರಂದು ರಂದು 33 ಸಾವಿರ, 19.ದಿಃ07.06.2018 ರಂದು ರಂದು 33 ಸಾವಿರ, 20.ದಿಃ07.07.2018 ರಂದು ರಂದು 33 ಸಾವಿರ, 21.ದಿಃ10.08.2018 ರಂದು ರಂದು 33 ಸಾವಿರ, 22.ದಿಃ07.09.2018 ರಂದು ರಂದು 33 ಸಾವಿರ, 23.ದಿಃ10.10.2018 ರಂದು ರಂದು 33 ಸಾವಿರ, 24.ದಿಃ11.10.2018 ರಂದು 1 ಲಕ್ಷ, 25.ದಿಃ29.11.2018 ರಂದು 14 ಸಾವಿರ, 26.ದಿಃ18.10.2019 ರಂದು 14 ಸಾವಿರ, 27.ದಿಃ15.11.2019 ರಂದು 18 ಸಾವಿರ, 28.ದಿಃ07.12.2019 ರಂದು 18 ಸಾವಿರ, 29.ದಿಃ17.01.2020 ರಂದು 18 ಸಾವಿರ, 30.ದಿಃ19.02.2020 ರಂದು 18 ಸಾವಿರ, 31.ದಿಃ17.03.2020 ರಂದು 18 ಸಾವಿರ, 32.ದಿಃ07.05.2020 ರಂದು 18 ಸಾವಿರ ಇಷ್ಟೆಲ್ಲ ಹಣ ಸದರಿ ಬ್ಯಾಂಕ್ ಖಾತೆಯಿಂದ ನನಗೆ ಚಕ್ ಮುಖಾಂತರ ವರ್ಗಾವಣೆ ಆಗಿದೆ ಎಂದರೆ ಸರಿಯಲ್ಲ. ನನಗೆ ಗೂಗಲ್ ಪೇ ಮತ್ತು ಫೋನ್ ಪೇ ವ್ಯವಹಾರ ಗೊತ್ತು. ನಾನು ಸದರಿ ಸೌಲಭ್ಯವನ್ನು ನನ್ನ ಮೊಬೈಲ್ ಮುಖಾಂತರ ಉಪಯೋಗಿಸುತ್ತೇನೆ. ಪ್ರತಿವಾದಿ ನನಗೆ ಬಾಡಿಗೆ ಹಣವನ್ನು ಗೂಗಲ್ ಪೇ ಮುಖಾಂತವೂ ಸಹ ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿಃ17.02.2020 ರಂದು 10 ಸಾವಿರ, ದಿಃ11.04.2020 ರಂದು 10 ಸಾವಿರ, ದಿಃ13.04.2020 ರಂದು 10 ಸಾವಿರ, ದಿಃ17.04.2020 ರಂದು 10 ಸಾವಿರ,

ದಿಃ21.04.2020 ರಂದು 4 ಸಾವಿರಗಳನ್ನು ಗೂಗಲ್ ಪೇ ಮುಖಾಂತರ ಪ್ರತಿವಾದಿ ನನಗೆ ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಗೂಗಲ್ ಖಾತೆಗೆ ಒಂದೇ ಬ್ಯಾಂಕ್ ಖಾತೆಯನ್ನು ಉಪಯೋಗಿಸುತ್ತೇನೆ. ಮಡಿಕೇರಿಯ ಎಸ್.ಬಿ.ಐ ಅಲ್ಲಿ ಇರುವ ಬ್ಯಾಂಕ್ ಖಾತೆಯನ್ನು ನನ್ನ ಗೂಗಲ್ ಪೇ ವ್ಯವಹಾರಕ್ಕೆ ಹೊಂದಿಸಿದ್ದೇನೆ. ಪ್ರತಿವಾದಿ ನನಗೆ ನಗದು ರೂಪದಲ್ಲಿ ಪಾವತಿ ಮಾಡಿದ ಬಾಡಿಗೆ ಸಂಬಂಧ ನಾನು ಬಾಡಿಗೆ ರಶೀದಿಗೆ ಸಹಿ ಮಾಡಿ ಅವರಿಗೆ ಕೊಡುತ್ತಿದ್ದೆ ಎಂದರೆ ಸರಿಯಲ್ಲ.

1. ದಿಃ16.10.2019 ರಂದು 18 ಸಾವಿರ
2. ದಿಃ15.11.2019 ರಂದು 18 ಸಾವಿರ
3. ದಿಃ04.12.2019 ರಂದು 33 ಸಾವಿರ
4. ದಿಃ04.01.2021 ರಂದು 33 ಸಾವಿರ
5. ದಿಃ05.02.2021 ರಂದು 33 ಸಾವಿರ
6. ದಿಃ06.03.2021 ರಂದು 18 ಸಾವಿರ
7. ದಿಃ29.03.2021 ರಂದು 28 ಸಾವಿರ
8. ದಿಃ05.04.2021 ರಂದು 33 ಸಾವಿರ
9. ದಿಃ10.05.2021 ರಂದು 28,800/-
10. ದಿಃ06.06.2021 ರಂದು 18 ಸಾವಿರ
11. ದಿಃ04.07.2021 ರಂದು 22,500/-
12. ದಿಃ05.08.2021 ರಂದು 33 ಸಾವಿರ
13. ದಿಃ06.09.2021 ರಂದು 27 ಸಾವಿರ
14. ದಿಃ04.10.2021 ರಂದು 30 ಸಾವಿರ

15. ದಿಃ04.12.2021 ರಂದು 33 ಸಾವಿರ
16. ದಿಃ05.01.2022 ರಂದು 33 ಸಾವಿರ
17. ದಿಃ02.02.2022 ರಂದು 18 ಸಾವಿರ
18. ದಿಃ25.02.2022 ರಂದು 25 ಸಾವಿರ
19. ದಿಃ06.03.2022 ರಂದು 33 ಸಾವಿರ
20. ದಿಃ04.04.2022 ರಂದು 20 ಸಾವಿರ
21. ದಿಃ10.04.2022 ರಂದು 26 ಸಾವಿರ
22. ದಿಃ06.05.2022 ರಂದು 18 ಸಾವಿರ
23. ದಿಃ06.06.2022 ರಂದು 33 ಸಾವಿರ
24. ದಿಃ06.07.2022 ರಂದು 25 ಸಾವಿರ
25. ದಿಃ06.09.2022 ರಂದು 30 ಸಾವಿರ
26. ದಿಃ04.10.2022 ರಂದು 18 ಸಾವಿರ
27. ದಿಃ06.10.2022 ರಂದು 33 ಸಾವಿರ
28. ದಿಃ04.01.2023 ರಂದು 33 ಸಾವಿರ
29. ದಿಃ04.02.2023 ರಂದು 33 ಸಾವಿರ
30. ದಿಃ06.04.2023 ರಂದು 33 ಸಾವಿರ
31. ದಿಃ06.05.2023 ರಂದು 33 ಸಾವಿರ ರಂತೆ ನನಗೆ ನಗದು ರೂಪದಲ್ಲಿ ಹಣ ಪಾವತಿ ಮಾಡಿ ಬಾಡಿಗೆ ರಶೀದಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು. ಸದರಿ ಬಾಡಿಗೆ ರಶೀದಿಯಲ್ಲಿ ಇರುವ ಸಹಿಗಳು ನನ್ನ ಸಹಿಗಳು ಎಂದರೆ ಸಾಕ್ಷಿ ಅವು ನಕಲಿ ಸಹಿಗಳು ಎನ್ನುತಾರೆ. ಬಾಡಿಗೆ ರಶೀದಿಯಲ್ಲಿ ಇರುವ ಸಹಿಗಳು ನನ್ನದಾಗಿದ್ದರು

ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ದಿಃ31.05.2020 ರವರಿಗೆ ನನ್ನ ಮತ್ತು ಪ್ರತಿವಾದಿ ನಡುವೆ ದಾವಾ ಸ್ವತ್ತಿನ ಸಂಬಂಧ ಬರವಣಿಗೆ ಬಾಡಿಗೆ ಕರಾರು ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2017-18 ರವರಿಗೆ ಮಾತ್ರ ಬಾಡಿಗೆ ಕರಾರು ಲಿಖಿತವಾಗಿ ಇತ್ತು ಎನ್ನುತ್ತಾರೆ. ದಿಃ31.05.2020 ರವರಿಗೆ ದಸ್ತಾವೇಜು ಮುಖಾಂತರ ನನ್ನ ಮತ್ತು ಪ್ರತಿವಾದಿ ನಡುವೆ ಬಾಡಿಗೆ ಕರಾರು ಇದ್ದರು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2020 ರ ಮಾರ್ಚ್ ತಿಂಗಳಿಂದ ಭಾರತಲ್ಲಿ ಕೋವಿಡ್ ಮಹಾಮಾರಿ ಬಂದಿತ್ತು ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ ಆದರೆ ಕೋವಿಡ್ ಬಂದಿತ್ತು ಎನ್ನುತ್ತಾರೆ. ಮಾರ್ಚ್ 2020 ರಿಂದ ಸರ್ಕಾರ ಎಲ್ಲಾ ಹೊಟೇಲ್ ಮತ್ತು ಇತರ ಅಂಗಡಿ ಮುಗ್ಗಟ್ಟುಗಳನ್ನು ಲಾಕ್ ಡೌನ್ ನಿಷೇಧ ವಿಧಿಸಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಲಾಕ್ ಡೌನ್ ಅವಧಿಯಲ್ಲಿ ನನ್ನ ಕರಿಮೆಣಸು ವ್ಯವಹಾರ ನಡೆಯುತ್ತಿತ್ತು ಎನ್ನುತ್ತಾರೆ. ಕೋವಿಡ್ ಅವಧಿಯಲ್ಲಿ ನಿಷೇಧ ಇದಿದ್ದರಿಂದ ಮತ್ತು ಆ ಅವಧಿಯಲ್ಲಿ ವ್ಯಾಪಾರ ಇಲ್ಲದೇ ಇದಿದ್ದರಿಂದ ನಾನೇ ಬಾಡಿಗೆ ಕೊಡುವುದು ಬೇಡ ಎಂದು ಕೇಳಿದ್ದೆ ಎಂದರೆ ಸರಿಯಲ್ಲ. ಕೋವಿಡ್ ಅವಧಿಯಲ್ಲಿ ಪ್ರತಿವಾದಿ ಪೂರ್ಣಪ್ರಮಾಣದ ಬಾಡಿಗೆ ಮೊತ್ತವನ್ನು ಕೊಡಲು ಸಾಧ್ಯವಾಗದೇ ಇದ್ದರು

ಅವರಿಗೆ ಎಷ್ಟು ಸಾಧ್ಯ ಅಷ್ಟು ಬಾಡಿಗೆ ಹಣ ಪಾವತಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಿಃ31.05.2020 ರ ನಂತರ ದಿಃ21.11.2023 ರವರಿಗೆ ನನ್ನ ಮತ್ತು ಪ್ರತಿವಾದಿಯ ನಡುವೆ ಬಾಡಿಗೆ ಕರಾರು ಬಾಯಿ ಮಾತಿನಲ್ಲಿ ಮುಂದುವರೆಯಿತು ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಬಾಡಿಗೆದಾರನಾಗಿ ಇದ್ದ ಎಲ್ಲಾ ಅವಧಿಯ ಬಾಡಿಗೆ ಹಣವನ್ನು ನನಗೆ ಸಂಪೂರ್ಣ ಪಾವತಿ ಮಾಡಿದ್ದು ಯಾವುದೇ ಭಾಕಿ ಉಳಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ದಿಃ21.11.2023 ರಂದು ದಾವಾ ಸ್ವತ್ತಿನ ಸ್ವಾಧೀನವನ್ನು ನನಗೆ ವಾಪಸ್ಸು ವಹಿಸಿ ಅದರ ಕೀಯನ್ನು ನನ್ನ ಕೈಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಕೀಯನ್ನು ಪ್ರತಿವಾದಿ ನನಗೆ ವಹಿಸಿಕೊಟ್ಟಿದ್ದನ್ನು ನನ್ನ ಗಮನಕ್ಕೆ ತಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನನಗೆ ವಹಿಸಿಕೊಟ್ಟಿದ್ದರೂ ಮತ್ತು ಭಾಕಿ ಇಲ್ಲದೆ ಸಂಪೂರ್ಣ ಬಾಡಿಗೆ ಹಣವನ್ನು ಕೊಟ್ಟಿದ್ದರೂ ಪ್ರತಿವಾದಿಗೆ ತೊಂದರೆ ಕೊಡಬೇಕೆಂದು ಈ ದಾವೆಯನ್ನು ಮುಂದುವರೆಸಿಕೊಂಡು ಬರುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ಏನು ಹೇಳಿದ್ದೇನೆ ಎಂದು ನನಗೆ ಮಾಹಿತಿ ಇದೆ. ಈ ದಾವೆಯಲ್ಲಿ ನಾನು ದಾವಾ ಸ್ವತ್ತನ್ನು ಖಾಲಿ ಮಾಡಿಕೊಡಿ ಮತ್ತು ಭಾಕಿ ಬಾಡಿಗೆ ಹಣವನ್ನು ಕೊಡಿಸಿಕೊಡಿ ಎಂದು ಪರಿಹಾರ ಕೇಳಿರುತ್ತೇನೆ.

3. ದಾವಾ ಸ್ವತ್ತಿನ ಸ್ವರೂಪವನ್ನು ನವೀಕರಿಸಲಾಗಿದೆ ಎಂದರೆ ಸರಿಯಲ್ಲ. ನಿಡಿ.4 ಮತ್ತು 5 ರ ಫೋಟೊದಲ್ಲಿ ಕಾಣುವ ದೃಶ್ಯ ದಾವಾ ಸ್ವತ್ತಿನ ಅಡುಗೆ ಮನೆ ಎಂದರೆ ಸಾಕ್ಷಿ ನನಗೆ ಹೇಳಲು ಗೊತ್ತಾಗುವುದಿಲ್ಲ ಎನ್ನುತ್ತಾರೆ. ನೀವು ದಾವಾ ಸ್ವತ್ತನ್ನು ಪ್ರತಿವಾದಿಗೆ ಬಾಡಿಗೆ ಕೊಟ್ಟಾಗ ಇದ್ದ ಸ್ಥಿತಿಯಲ್ಲೇ ಅದರ ಅಡುಗೆ ಕೋಣೆ ಇದೇಯಾ ಎಂದರೆ ಸಾಕ್ಷಿ ಅದನ್ನು ಬದಲಾವಣೆ ಮಾಡಿದ್ದಾರೆ ಎನ್ನುತ್ತಾರೆ. ಯಾರು ಆ ರೀತಿ ಬದಲಾವಣೆ ಮಾಡಿದ್ದಾರೆ ಎಂದರೆ ಸಾಕ್ಷಿ ಪ್ರತಿವಾದಿಯೇ ಮಾಡಿರಬಹುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ದಾವಾ ಸ್ವತ್ತನ್ನು ಪ್ರತಿವಾದಿಯ ಬಾರ್ ಆ್ಯಂಡ್ ರೆಸ್ಟೊರೆಂಟ್ ಗೆ ಹೋಗಿದ್ದರಾ ಎಂದರೆ ಸಾಕ್ಷಿ ಹೋಗಿರುತ್ತೇನೆ ಎನ್ನುತ್ತಾರೆ. ನಾನು ಬಾರ್ ಆ್ಯಂಡ್ ರೆಸ್ಟೊರೆಂಟ್ ಗೆ ಹೋಗಿದ್ದಾಗ ಪ್ರತಿವಾದಿಗೆ ಬಾಡಿಗೆ ಕೊಟ್ಟ ಸ್ಥಿತಿಯಲ್ಲೇ ಇತ್ತು. ನಿಪಿ.4 ಮತ್ತು 5 ರಲ್ಲಿ ಕಾಣುವಂತೆ ಯಾವಾಗ ಮಾರ್ಪಾಡು ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ನವೀಕರಣದ ವಿಚಾರ ನನಗೆ ಗೊತ್ತಿದ್ದರೂ ನನಗೆ ಯಾವುದೇ ಮಾಹಿತಿ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾವು ಒಟ್ಟು ಐದು ಜನ ಮಕ್ಕಳು. ದಾವಾ ಸ್ವತ್ತು ಮತ್ತು ನಮ್ಮ ಕುಟುಂಬದ ಇತರ ಆಸ್ತಿಗಳ ಸಂಬಂಧ ನನ್ನ ಸಹೋದರರಿಯರು ಹಿಸ್ಸೆ ಕೋರಿ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆ ರಾಜಿ ಸಂದಾನದ ಮುಖಾಂತರ ಇತ್ಯರ್ಥ ಆಗಿದೆ. ಸದರಿ ರಾಜಿ ಸಂದಾನದಲ್ಲಿ ನನ್ನ ಸಹೋದರಿಯರಿಗೆ ಆಸ್ತಿ ಹಿಸ್ಸೆ ಕೊಟ್ಟಿರುತ್ತೇನೆ. ರಾಜಿ ಸಂದಾನ ಡಿಕ್ರಿಯ ಪ್ರಕಾರ ನ್ಯಾಯಾಲಯದ ನಿಯೋಗಿ ಬಂದು ಹಿಸ್ಸೆಯನ್ನು ಗುರುತಿಸಿದಂತೆ ನಾನು ಮತ್ತು ನನ್ನ ಸಹೋದರಿಯರು ಸ್ವಾಧೀನ ಅನುಭದಲ್ಲಿ ಇದ್ದೇವೆ ಎಂದರೆ ಸರಿ. ಸದರಿ ರಾಜಿ ಸಂದಾನದಲ್ಲಿ ದಾವಾ ಸ್ವತ್ತು ನನಗೆ ಮತ್ತು ನನ್ನ ಸಹೋದರಿಯರಿಗೆ ಹಿಸ್ಸೆ ಆಗಿದೆ. ನನಗೆ ಮೂರು ಜನ ಸಹೋದರಿಯರು ಇದ್ದಾರೆ. ದಾವಾ ಸ್ವತ್ತು ಮತ್ತು ಇತರ ಆಸ್ತಿ ಸಂಬಂಧ ನ್ಯಾಯಾಲಯದಲ್ಲಿ ಹಿಸ್ಸೆ ಆಗಿರುವ ಬಾಬ್ತು ನನ್ನ ಬಳಿ ದಾಖಲೆ ಇದೆ. ದಾವಾ ಸ್ವತ್ತು ಪಾಲಿನ ಮುಖಾಂತರ 2023ರಲ್ಲಿ ವಿಭಾಗ ಆಯಿತು ಎಂದರೆ ಸಾಕ್ಷಿ ನನಗೆ ನಿರ್ದಿಷ್ಟ ದಿನಾಂಕ ನೆನಪಿಲ್ಲ ಎನ್ನುತ್ತಾರೆ. ದಾವಾ ಸ್ವತ್ತು ಆ ರೀತಿ ವಿಭಾಗ ಆಗಿದ್ದರಿಂದ ದಿಃ31.05.2023 ರಿಂದ ಬಾಡಿಗೆ ಕರಾರು ಸ್ಥಗಿತವಾಯಿತು ಎಂದರೆ ಸಾಕ್ಷಿ 2018 ರಲ್ಲೇ ಬಾಡಿಗೆ ಕರಾರು ಸ್ಥಗಿತವಾಗಿದೆ ಎನ್ನುತ್ತಾರೆ. 2023 ರಲ್ಲಿ ದಾವಾ ಸ್ವತ್ತು ಅರ್ಧ ನನ್ನ ಸಹೋದರಿಯರ ಹಿಸ್ಸೆಗೆ

ಹೋಗಿದ್ದು ಹಾಗಾಗಿ ದಾವಾ ಕರಾರು ಸ್ಥಗಿತವಾಗಿದ್ದರು ಪ್ರತಿವಾದಿಯಿಂದ ಅಕ್ರಮ ಲಾಭ ಪಡೆಯಬೇಕೆಂಬ ಉದ್ದೇಶದಿಂದ 2018 ರಲ್ಲಿ ಬಾಡಿಗೆ ಕರಾರು ಮುಗಿದಿದೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ.

5. 2018 ರಿಂದ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಅಕ್ರಮವಾಗಿ ಸಾವಧೀನ ಅನುಭದಲ್ಲಿ ಇದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 2018 ರಿಂದ ನನಗೆ ಬಾಡಿಗೆ ಮತ್ತು ನಷ್ಟ ಪರಿಹಾರ ಕೊಡಲು ಬಾಧ್ಯಸ್ಥ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ತಾನು ಪಾವತಿ ಮಾಡಬೇಕಿದ್ದ ಸಂಪೂರ್ಣ ಬಾಡಿಗೆ ಹಣವನ್ನು ನನಗೆ ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. 2023 ರಲ್ಲೇ ಪ್ರತಿವಾದಿ ನನಗೆ ದಾವಾ ಸ್ವತ್ತಿನ ಸ್ವಾಧೀನವನ್ನು ವಹಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 2018-19 ಮತ್ತು 2019-20 ರ ಅವಧಿಯಲ್ಲಿ ಬಾಡಿಗೆ ಕರಾರು ಆಗಿದ್ದರು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾಹಿತಿಗೆ ಇರುವಂತೆ ದಾವಾ ಸ್ವತ್ತಿನಲ್ಲಿ ಆಶೀರ್ವಾದ ಹೊಟೇಲ್ ಮತ್ತು ಇತರ ವ್ಯವಹಾರಗಳು ನಡೆಯುತ್ತಿವೆ ಎಂದರೆ ಸಾಕ್ಷಿ ಆಶೀರ್ವಾದ ಹೊಟೇಲ್ ಇರುವುದು ಗೊತ್ತು ಆದರೆ ಇತರ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆಶೀರ್ವಾದ ಹೊಟೇಲ್ ಗೆ ನಾನೇ ಕಟ್ಟಡವನ್ನು ಬಾಡಿಗೆ ಕೊಟ್ಟಿದ್ದೇನೆ ಎಂದರೆ

ಸಾಕ್ಷಿ ಯಾರು ಕೊಟ್ಟಿದ್ದಾರೆ ಗೊತ್ತಿಲ್ಲ ಪ್ರತಿವಾದಿಯೆ ಕೊಟ್ಟಿರಬಹುದು ಎನ್ನುತ್ತಾರೆ. ಆಶೀರ್ವಾದ ಹೊಟೇಲ್ ನ ಅರ್ಧ ಕಟ್ಟಡ ನನಗೆ ಸೇರಿದ್ದು ಎಂದರೆ ಸರಿ. ಆಶೀರ್ವಾದ ಹೊಟೇಲ್ ಗೆ ನನ್ನ ಅನುಮತಿ ಇಲ್ಲದೇ ಏಕೆ ಬಾಡಿಗೆ ಕೊಟ್ಟಿದೀರಾ ಎಂದು ಪ್ರತಿವಾದಿಯ ಬಳಿ ಕೇಳಿದೀರಾ ಎಂದರೆ ಸಾಕ್ಷಿ ನಾನು ಏಕೆ ಕೇಳಲಿ ಎನ್ನುತ್ತಾರೆ. ಆಶೀರ್ವಾದ ಹೊಟೇಲ್ ಗೆ ನಾನೇ ಕಟ್ಟಡ ಬಾಡಿಗೆ ಕೊಟ್ಟಿರುವುದರಿಂದ ಪ್ರತಿವಾದಿ ಬಳಿ ನಾನು ಕೇಳಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ಹೇಳಿರುವ ವಿಚಾರಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಯಿಂದ ಅಕ್ರಮ ಲಾಭ ಗಳಿಸಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆ ಹೂಡಿದಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/–

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.